# ಗೇರು ಕೃಷಿಕರಿಗೆ  ಮಾರ್ಗಸೂಚಿಗಳು ಮತ್ತು ಸಲಹೆಗಳು

**ಸಾಮಾನ್ಯ ಮಾರ್ಗಸೂಚಿಗಳು**

ನಿಗದಿತ ಎಲ್ಲಾ ಸುರಕ್ಷತಾ ಕ್ರಮಗಳನ್ನು ಗಮನಿಸುವುದರ ಮೂಲಕ ಕಾರ್ಮಿಕರಿಗೆ ಕೊರೋನಾ ಸೋಂಕನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ.

ತೋಟದಲ್ಲಿ ಕೆಲಸ ಮಾಡುವಾಗ ಮತ್ತು ತೋಟಕ್ಕೆ ಹೋಗುವಾಗ ಮತ್ತು ತೋಟದಿಂದ ಬರುವಾಗ ಮುಖವಾಡಗಳನ್ನು ಬಳಸಿರಿ. ನಿಯಮಿತವಾಗಿ ಸೋಪಿನಿಂದ ಕೈಗಳನ್ನು ಚೆನ್ನಾಗಿ ತೊಳೆಯಿರಿ. ಮುಖ, ಮೂಗು, ಬಾಯಿ ಮತ್ತು ಕಣ್ಣುಗಳನ್ನು ಕೈಗಳಿಂದ ಸ್ಪರ್ಶಿಸುವುದನ್ನು ತಪ್ಪಿಸಿ.

ಆರೋಗ್ಯ ಸೇತು ಆಪ್ ನ್ನು ಗೂಗಲ್ ಪ್ಲೇಸ್ಟೋರಿನಿಂದ ಇಳಿಸಿ ನಿಮ್ಮ ಮೊಬೈಲುಗಳಲ್ಲಿ ಸ್ಥಾಪಿಸಿಕೊಳ್ಳಿ

ರೈತರಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಹೊರಡಿಸಿದ ಇತರ ಸಲಹೆಗಳನ್ನು ಅನುಸರಿಸಿ.

**ನರ್ಸರಿ ಕಾರ್ಯಾಚರಣೆಗಳು**

ಮೇಲೆ ವಿವರಿಸಿದಂತೆ ಕೊರೋನಾ ಹರಡುವಿಕೆಯ ವಿರುದ್ಧ ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು ನರ್ಸರಿ ಪ್ಯಾಕೆಟ್ಟುಗಳನ್ನು ತುಂಬುವ ಹಾಗೂ ಬೀಜಗಳನ್ನು ಬಿತ್ತನೆ ಮಾಡುವಂತಹ ಕಾರ್ಯಾಚರಣೆಗಳನ್ನು ಪ್ರಾರಂಭಿಸಬಹುದು.

**ಹೊಸದಾಗಿ ನೆಡುವಿಕೆ:**

ಉತ್ತಮ ತಳಿಯ ಗೇರು ಗಿಡಗಳನ್ನು ಅಧಿಕೃತ ನರ್ಸರಿಗಳಿಂದ ತರಿಸಬಹುದು

ಹೊಸ ಗಿಡಗಳನ್ನು ನೆಡಲು ಭೂಮಿಯನ್ನು ಸಿದ್ಧಪಡಿಸಬಹುದು

ಒಂದು ಮೀಟರ್ ಅಗಲ, ಉದ್ದ ಮತ್ತು ಆಳವಿರುವ ಗುಂಡಿಗಳನ್ನು ಆಯಾ ತಳಿಗಳಿಗೆ ನಿಗದಿಪಡಿಸಿದ ಅಂತರದಲ್ಲಿ ತೆಗೆದು ಒಂದು ವಾರ ಬಿಸಿಲಿಗೆ ಬಿಡಿ. ನಂತರ ಗುಂಡಿಯ ಮುಕ್ಕಾಲುಭಾಗ ಮಣ್ಣು ತುಂಬಬಹುದು.

**ಸವರುವಿಕೆ**

ಸಣ್ಣ ಗಿಡಗಳಲ್ಲಿ ಮೂರು ಅಡಿಗಿಂತ ಕೆಳಗಿರುವ ಹಾಗೂ ನೆಲ ಮುಟ್ಟುತ್ತಿರುವ ಕೊಂಬೆಗಳನ್ನು ಸವರಬೇಕು

ಬೆಳೆದ ಮರಗಳಲ್ಲಿ, ೧೫ ಅಡಿಗೆ ಮುಖ್ಯ ಕಾಂಡದ ಎತ್ತರವನ್ನು ಸೀಮಿತಗೊಳಿಸಿ. ಮರದ ಒಳಭಾಗದಲ್ಲಿರುವ ಸತ್ತ, ಒಣಗಿದ ಹಾಗೂ ಅಡ್ಡಾದಿಡ್ಡಿ ಬೆಳೆದ ಕೊಂಬೆಗಳನ್ನು ಕತ್ತರಿಸಿ.

ಅತಿಸಾಂದ್ರ ಪದ್ಧತಿಯಲ್ಲಿ, ಕೊಯ್ಲಾದ ಮೇಲೆ ಒಂದು ಮೀಟರ ಎತ್ತರಕ್ಕೆ ಕತ್ತರಿಸಿ ಮತ್ತು ಮೊದಲ ಕಂತಿನ ರಸಗೊಬ್ಬರಗಳನ್ನು ಕೊಡಿ.

ಸವರುವಿಕೆಯ ನಂತರ ಬೋರ್ಡೋ ಮಿಶ್ರಣ (೧%) ವನ್ನು ಕತ್ತರಿಸಿದ ಭಾಗಗಳಿಗೆ ಹಚ್ಚಿ. ಇದು ಫಂಗಸ್ ತಡೆಗಟ್ಟಲು ಸಹಕಾರಿ.

.